ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 755

ಸದಸ್ಯರ ಹೆಸರು : ಶ್ರೀ ಎಂ.ಎ.ಗೋಪಾಲಸ್ವಾಮಿ

ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 05.03.2021

	ಪ್ರಶ್ನೆ	ಉತ್ತರ
ಅ)	ಕೆಎಸ್‌ಆರ್‌ಟಿಸಿ ಮತ್ತು ಬಿ.ಎಂ.ಟಿ.ಸಿ ನೌಕರರಿಗೆ ಕ್ಷುಲಕ ಕಾರಣಗಳಿಗಾಗಿ ನೋಟೀಸ್ ಜಾರಿ ಮಾಡುವುದು, ವೇತನ ತಡೆಹಿಡಿಯುವುದು ಮತ್ತು ಇಲಾಖಾ ವಿಚಾರಣೆಗೆ ಒಳಪಡಿಸುವಂತಹ ಪ್ರಕರಣಗಳು ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಸಂಬಂಧ ಕೈಗೊಂಡಿರುವ ಕ್ರಮಗಳೇನು;	ಕೆ.ಎಸ್.ಆರ್.ಟಿ.ಸಿ. ಮತ್ತು ಬಿ.ಎಂ.ಟಿ.ಸಿ. ನೌಕರರು ಸಂಸ್ಥೆಯಲ್ಲಿ ಪ್ರಚಲಿತವಿರುವ ಯಾವುದೇ ನಿಯಮಾವಳಿಗಳನ್ನು ಉಲ್ಲಂಘಿಸಿದಲ್ಲಿ ಅವರುಗಳ ವಿರುದ್ಧ ಪ್ರಕರಣದ ಗಹನತೆಗೆ ಅನುಗುಣವಾಗಿ ಸಂಸ್ಥೆಯ ನೌಕರರ (ನಡತೆ & ಶಿಸ್ತು) ನಿಯಮಾವಳಿಗಳು, 1971ರ ಪ್ರಕಾರ ಶಿಸ್ತು ಕ್ರಮ ಕೈಗೊಳ್ಳಲಾಗುತ್ತಿದೆಯೇ ಹೊರತು ವಿನಾಕಾರಣ ಯಾವುದೇ ಶಿಸ್ತು ಕ್ರಮ ಕೈಗೊಂಡಿರುವುದಿಲ್ಲ. ಆಡಳಿತ ಹಾಗೂ ನೌಕರರುಗಳ ಹಿತದೃಷ್ಟಿಯನ್ನು ಆಧರಿಸಿ, ನಿಗಮದಲ್ಲಿ ಕಾರ್ಯದಕ್ಷತೆ, ನಿಗದಿತ ಗುರಿ ಸಾಧನೆ ಹಾಗೂ ಶಿಸ್ತನ್ನು ಕಾಪಾಡುವ ನಿಟ್ಟಿನಲ್ಲಿ ನೌಕರರುಗಳ ದುರ್ನಡತೆ/ಕರ್ತವ್ಯಲೋಪ ಕುರಿತು ಆರೋಪ ಪಟ್ಟಿ ನೀಡಿ, ಅವಶ್ಯವಿದ್ದಲ್ಲಿ ವಿಚಾರಣೆ ನಡೆಸಿ ಆರೋಪಗಳು ಸಾಬೀತಾದಾಗ ದಂಡನೆಗಳನ್ನು ವಿಧಿಸಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ (ಶಿಸ್ತು ಮತ್ತು ನಡತೆ) ನಿಯಮಾವಳಿ, 1971 ಹಾಗೂ ಮುಂದುವರೆದ ತಿದ್ದುಪಡಿ ಅನುಸೂಚಿಗಳ ಅಧಿನಿಯಮದ ಅಡಿಯಲ್ಲಿ ಅವಕಾಶ ಇದ್ದು, ಆ ಪ್ರಕಾರ ಕ್ರಮ ಜಾರಿಯಲ್ಲಿದೆ.
ಆ)	ಹಾಸನ ಜಿಲ್ಲೆಯಲ್ಲಿರುವ ಕೆಎಸ್‌ಆರ್‌ಟಿಸಿ ಬಸ್ ಡಿಪೋಗಳ ಸಂಖ್ಯೆ ಎಷ್ಟು; ಈ ಡಿಪೋಗಳು ಹೊಂದಿರುವ ಬಸ್ಸುಗಳ ಸಂಖ್ಯೆ ಎಷ್ಟು; ಹಾಸನ ಜಿಲ್ಲೆಯ ಕೆಎಸ್‌ಆರ್‌ಟಿಸಿ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿಗಳ ಸಂಖ್ಯೆ ಎಷ್ಟು ಮತ್ತು ಅವರ ವಿವರ ನೀಡುವುದು; ಹಾಸನ ಜಿಲ್ಲೆಯಲ್ಲಿರುವ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಗಳ ಸಂಖ್ಯೆ ಎಷ್ಟು ಮತ್ತು ಅವುಗಳ ವಿವರ ನೀಡುವುದು;	ಕ.ರಾ.ರ.ಸಾ.ನಿಗಮದ ಹಾಸನ ಜಿಲ್ಲೆಯಲ್ಲಿ 9 ಬಸ್ ಡಿಪೋಗಳಿರುತ್ತವೆ. ದಿನಾಂಕ 01.03.2021ರಲ್ಲಿದ್ದಂತೆ ಸದರಿ ಡಿಪೋಗಳು ಹೊಂದಿರುವ ಬಸ್ಸುಗಳ ಸಂಖ್ಯೆ ಈ ಕೆಳಕಂಡಂತಿವೆ: (see table below)

ಕ್ರ ಸಂ.	ವಿಭಾಗ	ಘಟಕ	ಒಟ್ಟು ಬಸ್ಸುಗಳು
1	ಹಾಸನ	ಹಾಸನ ಘಟಕ-1	99
2		ಹಾಸನ ಘಟಕ-2	100
3		ಚನ್ನರಾಯಪಟ್ಟಣ	97
4		ರಾಮನಾಥಪುರ	75
5		ಹೊಳೆನರಸೀಪುರ	90
6		ಅರಕಲಗೂಡು	76
ಹಾಸನ ವಿಭಾಗದ ಒಟ್ಟು ಬಸ್ಸುಗಳು			**537**
7	ಚಿಕ್ಕಮಗಳೂರು	ಅರಸೀಕೆರೆ	105
8		ಸಕಲೇಶಪುರ	87
9		ಬೇಲೂರು	41
ಚಿಕ್ಕಮಗಳೂರು ವಿಭಾಗದ ಒಟ್ಟು ಬಸ್ಸುಗಳು			**233**
ಹಾಸನ ಜಿಲ್ಲೆಯಲ್ಲಿರುವ ಒಟ್ಟು ವಾಹನಗಳು(ಬಸ್ಸುಗಳು)			**770**

ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಹಾಸನ ವಿಭಾಗದ 6 ಘಟಕಗಳು, ವಿಭಾಗೀಯ ಕಾರ್ಯಾಗಾರ ಹಾಗೂ ಚಿಕ್ಕಮಗಳೂರು ವಿಭಾಗದಲ್ಲಿ 3 ಘಟಕಗಳು ಬರುತ್ತಿದ್ದು, ಸದರಿ ವ್ಯಾಪ್ತಿಯಲ್ಲಿ ಫೆಬ್ರವರಿ-2021ರ ಮಾಹೆಯ ಅಂತ್ಯಕ್ಕೆ ಒಟ್ಟಾರೆ 3545 ಅಧಿಕಾರಿ/ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿರುತ್ತಾರೆ. ಇವರ ಪೈಕಿ ಒಟ್ಟು 20 ಅಧಿಕಾರಿಗಳು, 3525 ಇತರೆ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ವಿವರವನ್ನು <u>ಅನುಬಂಧ-"ಅ"</u>ರಲ್ಲಿ ನೀಡಲಾಗಿದೆ.

		ಹಾಸನ ಜಿಲ್ಲೆಯಲ್ಲಿ ಕ.ರಾ.ರ.ಸಾ.ನಿಗಮದ ಈ ಕೆಳಕಂಡ ಒಟ್ಟು 20 ಬಸ್ ನಿಲ್ದಾಣಗಳಿವೆ:

ಕ್ರ.ಸಂ.	ಬಸ್ ನಿಲ್ದಾಣ	ಕ್ರ.ಸಂ.	ಬಸ್ ನಿಲ್ದಾಣ
1	ಹಾಸನ ಕೇಂದ್ರೀಯ	11	ದುದ್ದ
2	ಹಾಸನ ನಗರ	12	ನುಗ್ಗೇಹಳ್ಳಿ
3	ಸಕಲೇಶಪುರ	13	ಚನ್ನರಾಯಪಟ್ಟಣ
4	ಅರಸೀಕೆರೆ	14	ಹೊಳೇನರಸೀಪುರ
5	ಬೇಲೂರು	15	ರಾಮನಾಥಪುರ
6	ಆಲೂರು	16	ಕೊಣನೂರು
7	ಶಾಂತಿಗ್ರಾಮ	17	ಅರಕಲಗೂಡು
8	ಹಳೇಬೀಡು	18	ಗೊರೂರು
9	ಜಾವಗಲ್	19	ಸಾಲಗಾಮೆ
10	ಗಂಡಸಿ	20	ಹಿರಿಸಾವೆ

ಇ)	ಹಾಸನ ಜಿಲ್ಲೆಯ ಎಲ್ಲಾ ಗ್ರಾಮಗಳಿಗೂ ಕೆಎಸ್‌ಆರ್‌ಟಿಸಿ ಬಸ್‌ಗಳ ಸಂಚರಿಸುತ್ತಿವೆಯೇ; ಇಲ್ಲದಿದ್ದಲ್ಲಿ, ಎಲ್ಲಾ ಗ್ರಾಮಗಳಿಗೂ ಕೆಎಸ್‌ಆರ್‌ಟಿಸಿ ಬಸ್‌ಗಳು ಸಂಚರಿಸಲು ಯಾವಾಗ ಕ್ರಮ ವಹಿಸಲಾಗುವುದು? (ಮಾಹಿತಿ ನೀಡುವುದು)	ಹಾಸನ ಜಿಲ್ಲೆಯಲ್ಲಿನ ಒಟ್ಟು 2452 ಗ್ರಾಮಗಳ ಪೈಕಿ 2451 ಗ್ರಾಮಗಳಿಗೆ ನಿಗಮದ ವತಿಯಿಂದ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ. ಸಕಲೇಶಪುರ ತಾಲ್ಲೂಕಿನ ಅತ್ತಿಗನಹಳ್ಳಿಯ ರಸ್ತೆಯು ಭಾರಿ ವಾಹನಗಳ ಕಾರ್ಯಾಚರಣೆಗೆ ಯೋಗ್ಯವಾಗದೆ ಇರುವುದರಿಂದ ಸದರಿ ಗ್ರಾಮಕ್ಕೆ ಸಾರಿಗೆ ಸಂಪರ್ಕ ಕಲ್ಪಿಸಿರುವುದಿಲ್ಲ.

ಸಂಖ್ಯೆ: ಟಿಡಿ 61 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು